## ಕರ್ನಾಟಕ ಸರ್ಕಾರದ ನಡವಳಿ

ವಿಷಯ: 2015–16ನೇ ಸಾಲಿನ ಶಾಸನಬದ್ಧ ಅನುದಾನದ ತೃತೀಯ ತ್ರೈಮಾಸಿಕ ಕಂತನ್ನು ಗ್ರಾಮ ಪಂಚಾಯಿತಿಗಳಿಗೆ ಬಿಡುಗಡೆ ಮಾಡುವ ಬಗ್ಗೆ.

ಓದಲಾಗಿದೆ:
1) ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 129 ಗ್ರಾಪಂಕಾ 2002 (3) ದಿನಾಂಕ: 02–12–2003.
2) ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 234 ಗ್ರಾಪಂಅ 2007 ದಿನಾಂಕ:27–03–2008.
3) ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 253 ಎಎಫ್‌ಎನ್ 2015 ದಿನಾಂಕ: 01–04–2015.
4) ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 10 ಗ್ರಾಪಸೆ 2015 ದಿನಾಂಕ: 16–03–2015.
5) ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ 21 ಗ್ರಾಪಂಅ 2015 ದಿನಾಂಕ:24–06–2015
6) ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ 759 ಗ್ರಾಪಂಅ 2014 ಬೆಂಗಳೂರು, ದಿನಾಂಕ:09–01–2015, 13–02–2015, 30–04–2015 ಮತ್ತು 10–08–2015
7) ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 21 ಗ್ರಾಪಂಅ 2015, ಬೆಂಗಳೂರು, ದಿನಾಂಕ: 24–11–2015.

********

**ಪ್ರಸ್ತಾವನೆ:**

ಮೇಲೆ ಓದಲಾದ ಕ್ರಮ ಸಂಖ್ಯೆ (1)ರ ಸರ್ಕಾರದ ಆದೇಶದಲ್ಲಿ ಗ್ರಾಮ ಪಂಚಾಯಿತಿಗಳಿಗೆ ಬಿಡುಗಡೆ ಮಾಡುವ ಸರ್ಕಾರದ ಅನುದಾನವನ್ನು ರಾಜ್ಯ ಹುಜೂರು ಖಜಾನೆಯಿಂದ ಪೇಯೀಸ್ ರಸೀದಿ ಮೇಲೆ ಪಡೆದು ರಾಷ್ಟ್ರೀಯ ಬ್ಯಾಂಕುಗಳ ಮುಖಾಂತರ ಗ್ರಾಮ ಪಂಚಾಯಿತಿಗಳಿಗೆ ಬಿಡುಗಡೆ ಮಾಡಲು ಸರ್ಕಾರದ ಅಧೀನ ಕಾರ್ಯದರ್ಶಿ (ಜಿ.ಪಂ), ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ ರವರು ಸಕ್ಷಮ ಪ್ರಾಧಿಕಾರವಾಗಿರುತ್ತಾರೆ.

2015–16ನೇ ಸಾಲಿಗೆ ರಾಜ್ಯದ ಎಲ್ಲಾ ಗ್ರಾಮ ಪಂಚಾಯಿತಿಗಳಿಗೆ ಶಾಸನಬದ್ಧ ಅನುದಾನಕ್ಕಾಗಿ ಆಯವ್ಯಯ ಲೆಕ್ಕ ಶೀರ್ಷಿಕೆ **2515–00–198–1–07 (ಯೋಜನೆ)** ಅಡಿ ಒಟ್ಟಾರೆ ರೂ. 616.62 ಕೋಟಿ (ಆರು ನೂರ ಹದಿನಾರು ಕೋಟಿ ಅರವತ್ತೆರಡು ಲಕ್ಷ ರೂಪಾಯಿಗಳು) ಗಳನ್ನು ಒದಗಿಸಲಾಗಿದೆ. ಈ ಅನುದಾನದಿಂದ 2011ನೇ ವರ್ಷದ ಜನಗಣತಿ ಆಧಾರದ ಮೇಲೆ ಎಂಟು ಸಾವಿರಕ್ಕಿಂತ(8000 ಕ್ಕಿಂತ) ಕಡಿಮೆ ಜನಸಂಖ್ಯೆ ಇರುವ ಪ್ರತಿ ಗ್ರಾಮ ಪಂಚಾಯಿತಿಗೆ ವಾರ್ಷಿಕವಾಗಿ ತಲಾ ರೂ. 10.00 ಲಕ್ಷಗಳು ಹಾಗೂ ಎಂಟು ಸಾವಿರಕ್ಕಿಂತ ಹೆಚ್ಚಿಗೆ ಅಂದರೆ ಪ್ರತಿ 1000 ಜನ ಸಂಖ್ಯೆ ಏರಿಕೆಗೆ ಅನುಗುಣವಾಗಿ ರೂ. 1.00 ಲಕ್ಷ ಅನುದಾನವನ್ನು ಹೆಚ್ಚಿಸಲಾಗಿದೆ.

ಸರ್ಕಾರದ ಮೇಲೆ ಓದಲಾದ ಕ್ರಮ ಸಂಖ್ಯೆ(5)ರ ಆದೇಶದಲ್ಲಿ, 5629 ಗ್ರಾಮ ಪಂಚಾಯತಿಗಳಿಗೆ 1ನೇ ಕಂತಿನ ಶಾಸನಬದ್ಧ ಅನುದಾನವಾಗಿ ರೂ.154.00 ಕೋಟಿಗಳನ್ನ ಬಿಡುಗಡೆಗೊಳಿಸಲಾಗಿದೆ. ಸರ್ಕಾರದ ಮೇಲೆ ಓದಲಾದ ಕ್ರಮ ಸಂಖ್ಯೆ(7)ರ ಆದೇಶದಲ್ಲಿ, 6017+03 ಗ್ರಾಮ ಪಂಚಾಯತಿಗಳಿಗೆ 2ನೇ ಕಂತಿನ ಶಾಸನಬದ್ಧ ಅನುದಾನವಾಗಿ ರೂ.159.805 ಕೋಟಿಗಳನ್ನ ಬಿಡುಗಡೆಗೊಳಿಸಲಾಗಿದೆ. ಮೇಲೆ ಓದಲಾದ (6)ರ ಸರ್ಕಾರದ ಆದೇಶದಲ್ಲಿ, ರಾಜ್ಯದಲ್ಲಿ 460 ಗ್ರಾಮ ಪಂಚಾಯತಿಗಳನ್ನು ನೂತನವಾಗಿ ಸೃಜಿಸಲಾಗಿದೆ. ಒಟ್ಟಾರೆ ರಾಜ್ಯದಲ್ಲಿ ಪ್ರಸ್ತುತ 6018 ಗ್ರಾಮ ಪಂಚಾಯತಿಗಳಿದ್ದು, ಇವುಗಳಿಗೆ ತೃತೀಯ ತ್ರೈಮಾಸಿಕ ಕಂತಿನ ಶಾಸನಬದ್ಧ ಅನುದಾನ ರೂ.159.723ಕೋಟಿ (ಒಂದು ನೂರ ಐವತ್ತೊಂಬತ್ತು ಕೋಟಿ ಎಪ್ಪತ್ತೆರಡು ಲಕ್ಷದ ಮೂವತ್ತು ಸಾವಿರ ರೂಪಾಯಿಗಳು ಮಾತ್ರ)ಗಳನ್ನು ಬಿಡುಗಡೆ ಮಾಡಲು ಉದ್ದೇಶಿಸಿದೆ.

ಸದರಿ ಅನುದಾನದ ಪೈಕಿ ಮೇಲೆ ಓದಲಾದ ಕ್ರಮ ಸಂಖ್ಯೆ (2)ರ ಸರ್ಕಾರದ ಆದೇಶದಂತೆ, ಗ್ರಾಮ ಪಂಚಾಯತಿ ಸಿಬ್ಬಂದಿ ವೇತನಕ್ಕಾಗಿ ಶೇಕಡಾ 40 ರಷ್ಟು ಅನುದಾನವನ್ನು ಮತ್ತು ಉಳಿದ ಶೇಕಡಾ 60 ರಷ್ಟನ್ನು ಗ್ರಾಮ ಪಂಚಾಯತಿಗಳ ಬಾಕಿಯಿರುವ ಅಕ್ಟೋಬರ್ 2015 ರಿಂದ ಡಿಸೆಂಬರ್ 2015ರ ಅವಧಿಯ ವಿದ್ಯುತ್ ವೆಚ್ಚ ಪಾವತಿಸಲು ತಿಳಿಸಿದೆ. ಮೇಲೆ ಓದಲಾದ ಕ್ರಮ ಸಂಖ್ಯೆ(4)ರಲ್ಲಿ ಗ್ರಾಮ ಪಂಚಾಯತಿಗಳ ESCROW ಖಾತೆಗಳಿಗೆ ಸ್ಟೇಟ್ ಬ್ಯಾಂಕ್ ಆಫ್ ಮೈಸೂರು ಮೂಲಕ ಬಿಡುಗಡೆ ಮಾಡಲು ಸರ್ಕಾರವು ನಿರ್ಧರಿಸಿದೆ.

ಅದರಂತೆ ಈ ಕೆಳಕಂಡ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 21 ಗ್ರಾಪಂಅ 2015,**
**ಬೆಂಗಳೂರು, ದಿನಾಂಕ: 18-12-2015.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, 2015-16ನೇ ಸಾಲಿನ ಶಾಸನಬದ್ಧ ಅನುದಾನದ ತೃತೀಯ ತ್ರೈಮಾಸಿಕ ಕಂತಿನ ರೂ. 159.723 ಕೋಟಿಗಳನ್ನು (ಒಂದು ನೂರ ಐವತ್ತೊಂಬತ್ತು ಕೋಟಿ ಎಪ್ಪತ್ತೆರಡು ಲಕ್ಷದ ಮೂವತ್ತು ಸಾವಿರ ರೂಪಾಯಿಗಳು ಮಾತ್ರ) ಲೆಕ್ಕ ಶೀರ್ಷಿಕೆ **2515-00-198-1-07 (ಯೋಜನೆ)** ಅಡಿಯಲ್ಲಿ 6018 ಗ್ರಾಮ ಪಂಚಾಯತಿಗಳಿಗೆ ಬಿಡುಗಡೆ ಮಾಡಿ ಆದೇಶಿಸಿದೆ.

ಈ ಅನುದಾನದ ಮೊತ್ತವನ್ನು ಪೇಯೀಸ್ ರಸೀದಿಯ ಮೇಲೆ ಪಡೆದು ಸಿಂಡಿಕೇಟ್ ಬ್ಯಾಂಕ್, ಬೆಂಗಳೂರು ನಗರ ನೀರು ಸರಬರಾಜು ಮಂಡಳಿ ಶಾಖೆ, ಮೈಸೂರು ಬ್ಯಾಂಕ್ ವೃತ್ತ, ಬೆಂಗಳೂರು ಇಲ್ಲಿರುವ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆಯ ಉಳಿತಾಯ ಸಂಖ್ಯೆ 04462010088409 ಮುಖಾಂತರ ರಾಜ್ಯದಲ್ಲಿನ ಎಂಟು ಸಾವಿರಕ್ಕಿಂತ ಕಡಿಮೆ ಜನಸಂಖ್ಯೆ ಇರುವ ಎಲ್ಲಾ ಗ್ರಾಮ ಪಂಚಾಯಿತಿಗಳಿಗೆ ತಲಾ ರೂ. 2,50,000/- (ಎರಡು ಲಕ್ಷದ ಐವತ್ತು ಸಾವಿರ ರೂಪಾಯಿಗಳು. ಮಾತ್ರ) ಮತ್ತು ಎಂಟು ಸಾವಿರಕ್ಕಿಂತ ಹೆಚ್ಚಿನ ಜನಸಂಖ್ಯೆ ಇರುವ ಎಲ್ಲಾ ಗ್ರಾಮ ಪಂಚಾಯಿತಿಗಳಿಗೆ ಪ್ರತಿ ಒಂದು ಸಾವಿರ ಜನಸಂಖ್ಯೆ ಏರಿಕೆಗೆ ಅನುಗುಣವಾಗಿ ರೂ. 1,00,000/-(ಒಂದು ಲಕ್ಷ ರೂಪಾಯಿಗಳು ಮಾತ್ರ)ಅನುದಾನವನ್ನು ಹೆಚ್ಚಿಸಲಾಗಿದೆ. ಈ ಕೆಳಕಂಡ ಮಾದರಿಯಲ್ಲಿ ಗ್ರಾಮ ಪಂಚಾಯಿತಿಗಳಿಗೆ **ಅನುಬಂಧ(1)** ರಲ್ಲಿರುವಂತೆ ತೃತೀಯ ತ್ರೈಮಾಸಿಕ ಕಂತಿನ ಶಾಸನಬದ್ಧ ಅನುದಾನವನ್ನು ಬಿಡುಗಡೆ ಮಾಡಲು ಸರ್ಕಾರವು ಆದೇಶಿಸಿದೆ

1. ಪ್ರತಿ ಗ್ರಾಮ ಪಂಚಾಯಿತಿಗೆ ಬಿಡುಗಡೆ ಮಾಡುವ ಅನುದಾನದ ಪೈಕಿ ಶೇಕಡಾ 60ರಷ್ಟನ್ನು ಅಕ್ಟೋಬರ್ 2015 ರಿಂದ ಡಿಸೆಂಬರ್ 2015ರ ಅವಧಿಯ ವಿದ್ಯುತ್ ಬಿಲ್ ಪಾವತಿಸುವ ಸಲುವಾಗಿ ಮೇಲ್ಕಂಡ ಸಿಂಡಿಕೇಟ್ ಬ್ಯಾಂಕಿನಿಂದ ಸ್ಟೇಟ್ ಬ್ಯಾಂಕ್ ಆಫ್ ಮೈಸೂರು ಮೂಲಕ ಗ್ರಾಮ ಪಂಚಾಯತಿಗಳ ESCROW ಖಾತೆಗಳಿಗೆ ಆನ್‌ಲೈನ್ ಮುಖಾಂತರ ವರ್ಗಾಯಿಸಲು ಆದೇಶಿಸಿದೆ.
2. ಪ್ರತಿ ಗ್ರಾಮ ಪಂಚಾಯಿತಿಗೆ ಬಿಡುಗಡೆ ಮಾಡುವ ಶೇಕಡಾ 40 ರಷ್ಟು ಅನುದಾನವನ್ನು ಮಾತ್ರ ಸಿಬ್ಬಂದಿ ವೇತನಕ್ಕಾಗಿ ಮೇಲ್ಕಂಡ ಸಿಂಡಿಕೇಟ್ ಬ್ಯಾಂಕ್‌ನಿಂದ ನೇರವಾಗಿ ಜಿಲ್ಲಾ ಪಂಚಾಯಿತಿಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಬ್ಯಾಂಕ್ ಖಾತೆಗಳಿಗೆ ಆನ್‌ಲೈನ್ ಮುಖಾಂತರ ವರ್ಗಾಯಿಸಲು ಆದೇಶಿಸಿದೆ.

ಮೇಲ್ಕಂಡ ಉದ್ದೇಶಗಳಿಗಲ್ಲದೇ ಈ ಅನುದಾನವನ್ನು ಜಿಲ್ಲಾ ಪಂಚಾಯಿತಿ/ಗ್ರಾಮ ಪಂಚಾಯಿತಿಗಳು ಬೇರೆ ಯಾವುದೇ ಉದ್ದೇಶಕ್ಕೆ ವಿನಿಯೋಗಿಸತಕ್ಕದ್ದಲ್ಲ ಹಾಗೂ ಜಿಲ್ಲಾ ಪಂಚಾಯಿತಿಗಳು ವಿದ್ಯುತ್ ಬಿಲ್ ಪಾವತಿಸಲು ಬಿಡುಗಡೆ ಮಾಡಿರುವ ಅನುದಾನದ ವಿವರವನ್ನು ದಿನಾಂಕ: **31-01-2016** ರೊಳಗಾಗಿ ಸರ್ಕಾರಕ್ಕೆ ಕಳುಹಿಸತಕ್ಕದ್ದು.

ಸರ್ಕಾರದ ಆದೇಶ ಮತ್ತು ಜಿಲ್ಲಾಧಿಕಾರಿಗಳ ಅಧಿಸೂಚನೆಯಂತೆ ಹೊಸ ಗ್ರಾಮ ಪಂಚಾಯಿತಿಗಳು ರಚನೆಗೊಂಡಿದ್ದು, ವಾಸ್ತವವಾಗಿ ಅಸ್ತಿತ್ವ ಪಡೆದು ಕೊಳ್ಳದಿದ್ದರೆ ಅಂತಹ ಗ್ರಾಮ ಪಂಚಾಯಿತಿಗಳಿಗೆ ಒದಗಿಸಿರುವ ಅನುದಾನವನ್ನು ಜಿಲ್ಲಾ ಪಂಚಾಯಿತಿಗಳು ಸದ್ಯಕ್ಕೆ ತಡೆಯಿಡಿಯಬೇಕು. ಗ್ರಾಮ ಪಂಚಾಯಿತಿಗಳು ಅಸ್ತಿತ್ವಕ್ಕೆ ಬಂದ ನಂತರ ಅವುಗಳಿಗೆ ಅನುದಾನವನ್ನು ಬಿಡುಗಡೆಗೊಳಿಸಬೇಕೆಂದು ಆದೇಶಿಸಿದೆ. ಜಿಲ್ಲಾ ಪಂಚಾಯಿತಿಗಳು ಈ ಸಂಬಂಧ ಅನುದಾನದ ಬಿಡುಗಡೆ ಹಾಗೂ ಉಳಿಕೆಗಳ ಬಗ್ಗೆ ಮರು ಹೊಂದಾಣಿಕೆಯನ್ನು ಖಚಿತಪಡಿಸಿಕೊಳ್ಳುವುದು.

ಹಲವಾರು ಜಿಲ್ಲಾ ಪಂಚಾಯಿತಿಗಳು ಗ್ರಾಮ ಪಂಚಾಯಿತಿಗಳಿಗೆ ನೀಡಬೇಕಾದ ಶೇಕಡಾ 40ರಷ್ಟು ಅನುದಾನವನ್ನು ಬಿಡುಗಡೆ ಮಾಡುವಲ್ಲಿ 15 ದಿನಗಳಿಂದ 3-4 ತಿಂಗಳುಗಳವರೆಗೆ ವಿಳಂಬ ಮಾಡುತ್ತಿರುವುದು ಮತ್ತು ಈ ಅನುದಾನವನ್ನು ಚೆಕ್ ಅಥವಾ ಡಿ.ಡಿ. ಮುಖಾಂತರ ನೀಡುತ್ತಿರುವುದು ಹಾಗೂ ಕೆಲವು ಜಿಲ್ಲೆಗಳಲ್ಲಿ ಈ ಅನುದಾನದ ಚೆಕ್/ಡಿ.ಡಿ.ಗಳನ್ನು ತಾಲ್ಲೂಕು ಪಂಚಾಯಿತಿ ವಶಕ್ಕೆ ನೀಡಿ ನಂತರ ತಾಲ್ಲೂಕು ಪಂಚಾಯಿತಿಗಳಿಂದ ಗ್ರಾಮ ಪಂಚಾಯಿತಿಗಳಿಗೆ ನೀಡುತ್ತಿರುವುದನ್ನು ಸರ್ಕಾರ ಗಮನಿಸಿದೆ. ಆದುದರಿಂದ ಈ ಅನುದಾನದ ಮೊತ್ತವು ಸಿಂಡಿಕೇಟ್ ಬ್ಯಾಂಕ್ ಮುಖಾಂತರ ಜಿಲ್ಲಾ ಪಂಚಾಯಿತಿಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಬ್ಯಾಂಕ್ ಖಾತೆಗೆ ಆನ್-ಲೈನ್ ಮುಖಾಂತರ ಜಮೆಯಾದ ದಿನಾಂಕದಿಂದ 5 (ಐದು) ದಿನಗಳೊಳಗೆ ಸಂಬಂಧಪಟ್ಟ ಎಲ್ಲಾ ಗ್ರಾಮ ಪಂಚಾಯಿತಿಯ ಖಾತೆಗೆ ಆನ್-ಲೈನ್ ಮುಖಾಂತರ ಜಮಾ ಆಗಿರತಕ್ಕದ್ದು. ಯಾವುದೇ ಕಾರಣಕ್ಕೂ ಚೆಕ್ ಅಥವಾ ಡಿ.ಡಿ. ನೀಡತಕ್ಕದ್ದಲ್ಲ. ಅನುದಾನ ಬಿಡುಗಡೆ ಆದೇಶ ಮತ್ತು ಅನುದಾನವನ್ನು ಗ್ರಾಮ ಪಂಚಾಯಿತಿಗಳಿಗೆ ಆನ್-ಲೈನ್ ಮುಖಾಂತರ ವರ್ಗಾಯಿಸಿರುವ ದಿನಾಂಕದ ಮಾಹಿತಿಯನ್ನು ಮತ್ತು ಸದರಿ ಗ್ರಾಮ ಪಂಚಾಯಿತಿ ಖಾತೆಗಳಲ್ಲಿ ಜಮಾ ಆಗಿರುವ ದಿನಾಂಕವನ್ನು ಜಿಲ್ಲಾ

**ಪಂಚಾಯಿತಿ ವೆಬ್ ಸೈಟ್‌ನಲ್ಲಿ ಅಪ್ ಲೋಡ್ ಮಾಡತಕ್ಕದ್ದು. ಗ್ರಾಮ ಪಂಚಾಯಿತಿ ಸಿಬ್ಬಂದಿಗಳಿಗೆ ಪ್ರತಿ ತಿಂಗಳ 5ನೇ ದಿನಾಂಕದೊಳಗೆ ವೇತನ ಪಾವತಿಸಲು ಕ್ರಮ ವಹಿಸಿ, ವೇತನ ಪಾವತಿಸಿದ ವಿವರಗಳ ಮಾಹಿತಿಯನ್ನು ಪ್ರತಿ ತಿಂಗಳ 6ನೇ ದಿನಾಂಕದಂದು ಗ್ರಾಮ ಪಂಚಾಯಿತಿಗಳು ಪಂಚತಂತ್ರ ತಂತ್ರಾಂಶದಲ್ಲಿ ತಪ್ಪದೆ ಅಪ್ ಲೋಡ್ ಮಾಡತಕ್ಕದ್ದು. ಇದರಲ್ಲಿ ಯಾವುದೇ ಲೋಪವಾದಲ್ಲಿ ಸಂಬಂಧಪಟ್ಟವರಿಂದ ವಿಳಂಬದ ಅವಧಿಗೆ ಬಡ್ಡಿ ವಸೂಲಿ ಮಾಡಲು ಕ್ರಮ ವಹಿಸಲಾಗುವುದು.**

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ ಆರ್ಥಿಕ ಇಲಾಖೆ(ವೆಚ್ಚ-6) ಅ.ಟಿ.ಸಂಖ್ಯೆ:ಅಇ 267 ವೆಚ್ಚ-6/2015, ದಿನಾಂಕ:09-10-2015ರಲ್ಲಿ ಸಹಮತಿ ಪಡೆದು ಹೊರಡಿಸಲಾಗಿದೆ

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

18/12

(ಎಂ.ಬಿ.ಧೋತ್ರೆ)
ಸರ್ಕಾರದ ಅಧೀನ ಕಾರ್ಯದರ್ಶಿ(ಜಿ.ಪಂ.)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

ಇವರಿಗೆ:

1) ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ.
3) ಜಂಟಿ ನಿರ್ದೇಶಕರು, ರಾಜ್ಯ ಹುಜೂರು ಖಜಾನೆ, ಬೆಂಗಳೂರು.
4) ನಿರ್ದೇಶಕರು, ಎನ್.ಎಂ.ಸಿ., ಖಜಾನೆ ಇಲಾಖೆ, ಖನಿಜ ಭವನ, ಬೆಂಗಳೂರು.
5) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯಿತಿಗಳು.
6) ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ, ಬೆಂಗಳೂರು.
7) ವ್ಯವಸ್ಥಾಪಕ ನಿರ್ದೇಶಕರು, ಬೆಂಗಳೂರು ವಿದ್ಯುಚ್ಛಕ್ತಿ ಕಂಪನಿ, ಕೆ.ಆರ್.ವೃತ್ತ, ಬೆಂಗಳೂರು-01.
8) ವ್ಯವಸ್ಥಾಪಕ ನಿರ್ದೇಶಕರು, ಹುಬ್ಬಳ್ಳಿ ವಿದ್ಯುಚ್ಛಕ್ತಿ ಕಂಪನಿ, ಪಿ.ಬಿ.ರಸ್ತೆ, ನವನಗರ, ಹುಬ್ಬಳ್ಳಿ-580029.
9) ವ್ಯವಸ್ಥಾಪಕ ನಿರ್ದೇಶಕರು, ಗುಲ್ಬರ್ಗ ವಿದ್ಯುಚ್ಛಕ್ತಿ ಕಂಪನಿ, ಸ್ಟೇಷನ್ ರಸ್ತೆ, ಗುಲ್ಬರ್ಗ-585101.
10) ವ್ಯವಸ್ಥಾಪಕ ನಿರ್ದೇಶಕರು, ಮಂಗಳೂರು ವಿದ್ಯುಚ್ಛಕ್ತಿ ಕಂಪನಿ, ಎ.ಬಿ.ಶೆಟ್ಟಿ ವೃತ್ತ, ಮಂಗಳೂರು-575001.
11) ವ್ಯವಸ್ಥಾಪಕ ನಿರ್ದೇಶಕರು, ಚಾಮುಂಡೇಶ್ವರಿ ವಿದ್ಯುಚ್ಛಕ್ತಿ ಕಂಪನಿ, ನಂ.927, ಎಲ್‌ಜೆ ಅವೆನ್ಯೂ, ನ್ಯೂ ಕಾಂತರಾಜ ಅರಸ್ ರಸ್ತೆ, ಸರಸ್ವತಿಪುರಂ, ಮೈಸೂರು-570009.
12) ಕಾರ್ಯನಿರ್ವಾಹಕ ಅಧಿಕಾರಿಗಳು, ರಾಜ್ಯದ ಎಲ್ಲಾ ತಾಲ್ಲೂಕು ಪಂಚಾಯಿತಿಗಳು(**ಸಂಬಂಧಿಸಿದ ಗ್ರಾಮ ಪಂಚಾಯಿತಿಗಳಿಗೆ ಈ ಆದೇಶದ ಪ್ರತಿಯನ್ನು ತಲುಪಿಸುವ ವ್ಯವಸ್ಥೆ ಮಾಡುವಂತೆ ಸೂಚಿಸಲಾಗಿದೆ.**)
13) ವ್ಯವಸ್ಥಾಪಕರು, ಸಿಂಡಿಕೇಟ್ ಬ್ಯಾಂಕ್, ಬಿ.ಡಬ್ಲ್ಯೂ.ಎಸ್.ಎಸ್.ಬಿ. ಶಾಖೆ, ಅವೆನ್ಯೂ ರಸ್ತೆ, ಕಾವೇರಿ ಭವನದ ಮುಂಭಾಗ, ಬೆಂಗಳೂರು (ದೂರವಾಣಿ ಸಂಖ್ಯೆ: 080-22216450, 22215584)
14) ಸಂಪಾದಕರು, ಕರ್ನಾಟಕ ವಿಕಾಸ, ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.
15) ಮಾಹಿತಿ ಕೇಂದ್ರ/ವೆಬ್ ಸೈಟ್, ಗ್ರಾ.ಅ.ಪ ಇಲಾಖೆ.

ಪ್ರತಿ:

1) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು ಮತ್ತು ಅಭಿವೃದ್ಧಿ ಆಯುಕ್ತರು, ವಿಧಾನಸೌಧ ಇವರ ಆಪ್ತ ಕಾರ್ಯದರ್ಶಿಗಳ ಮಾಹಿತಿಗಾಗಿ.
2) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ ಇವರ ಆಪ್ತ ಕಾರ್ಯದರ್ಶಿಗಳ ಮಾಹಿತಿಗಾಗಿ.
3) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,(ಪಂ.ರಾಜ್), ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ ಇವರ ಆಪ್ತ ಕಾರ್ಯದರ್ಶಿಗಳ ಮಾಹಿತಿಗಾಗಿ.
4) ಸರ್ಕಾರದ ಅಧೀನ ಕಾರ್ಯದರ್ಶಿ, ವೆಚ್ಚ-6, ಆರ್ಥಿಕ ಇಲಾಖೆ, ವಿಧಾನಸೌಧ.
5) ಆಂತರಿಕ ಆರ್ಥಿಕ ಸಲಹೆಗಾರರು, ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ ಇಲಾಖೆ.

ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 21 ಗ್ರಾಪಂಅ 2015, ದಿನಾಂಕ:18-12-2015 ರ ಅನುಬಂಧ-1

## 2015-16ನೇ ಸಾಲಿನಲ್ಲಿ ಗ್ರಾಮ ಪಂಚಾಯಿತಿಗಳಿಗೆ ಮೂರನೇ ತ್ರೈಮಾಸಿಕ ಕಂತಿನಲ್ಲಿ ಬಿಡುಗಡೆ ಮಾಡುತ್ತಿರುವ ಶಾಸನಬದ್ಧ ಅನುದಾನದ ವಿವರ

ರೂ.ಕೋಟಿಗಳಲ್ಲಿ

| ಕ್ರಸಂ | ಉಪ ಲೆಕ್ಕ ಶೀರ್ಷಿಕೆ | ಜಿಲ್ಲೆಯ ಹೆಸರು | ಒಟ್ಟು ಗ್ರಾಮ ಪಂಚಾಯಿತಿಗಳ ಸಂಖ್ಯೆ | 2015-16ನೇ ಸಾಲಿಗೆ ಬಿಡುಗಡೆ ಮಾಡಬೇಕಾದ ಶಾಸನಬದ್ಧ ಅನುದಾನದ ಮೊತ್ತ | 2015-16 ನೇ ಸಾಲಿನಲ್ಲಿ 1ನೇ ಕಂತಿನಲ್ಲಿ ಈಗಾಗಲೇ ಬಿಡುಗಡೆ ಮಾಡಿದ ಶಾಸನಬದ್ಧ ಅನುದಾನದ ಮೊತ್ತ | 2015-16 ನೇ ಸಾಲಿನಲ್ಲಿ 2ನೇ ಕಂತಿನಲ್ಲಿ ಈಗಾಗಲೇ ಬಿಡುಗಡೆ ಮಾಡಿದ ಶಾಸನಬದ್ಧ ಅನುದಾನದ ಮೊತ್ತ | 2015-16 ನೇ ಸಾಲಿನಲ್ಲಿ ಬಿಡುಗಡೆಮಾಡುತ್ತಿರುವ ಮೂರನೇ ತ್ರೈಮಾಸಿಕ ಕಂತಿನ ಶಾಸನಬದ್ಧ ಅನುದಾನದ ಮೊತ್ತ | ವಿದ್ಯುತ್ ಬಿಲ್ ಪಾವತಿಸಲು ಶೇಕಡ 60ರ ಅನುದಾನದ ಮೊತ್ತ | ಸಿಬ್ಬಂದಿ ವೇತನ ಪಾವತಿಸಲು ಶೇಕಡ 40ರ ಅನುದಾನದ ಮೊತ್ತ |
|---|---|---|---|---|---|---|---|---|---|
| 1 | 461 | ಬಾಗಲಕೋಟೆ | 198 | 20.425 | 4.720 | 5.235 | 5.235 | 3.141 | 2.094 |
| 2 | 401 | ಬೆಂಗಳೂರು ನಗರ | 96 | 12.968 | 3.180 | 3.263 | 3.263 | 1.958 | 1.305 |
| 3 | 402 | ಬೆಂಗಳೂರು ಗ್ರಾಮಾಂತರ | 105 | 11.273 | 2.700 | 2.858 | 2.858 | 1.715 | 1.143 |
| 4 | 413 | ಬೆಳಗಾವಿ | 501 | 56.010 | 14.30 | 13.938 | 13.835 | 8.301 | 5.534 |
| 5 | 418 | ಬಳ್ಳಾರಿ | 199 | 21.905 | 5.540 | 5.455 | 5.505 | 3.303 | 2.202 |
| 6 | 419 | ಬೀದರ್ | 186 | 19.820 | 4.790 | 5.010 | 5.010 | 3.006 | 2.004 |
| 7 | 456 | ಚಾಮರಾಜನಗರ | 130 | 13.423 | 3.200 | 3.408 | 3.408 | 2.045 | 1.363 |
| 8 | 453 | ಚಿಕ್ಕಬಳ್ಳಾಪುರ | 157 | 15.913 | 3.890 | 4.008 | 4.008 | 2.405 | 1.603 |
| 9 | 408 | ಚಿಕ್ಕಮಗಳೂರು | 227 | 22.898 | 5.700 | 5.733 | 5.733 | 3.440 | 2.293 |
| 10 | 403 | ಚಿತ್ರದುರ್ಗ | 189 | 20.125 | 4.990 | 5.045 | 5.045 | 3.027 | 2.018 |
| 11 | 409 | ದಕ್ಷಿಣ ಕನ್ನಡ | 230 | 23.883 | 5.500 | 6.128 | 6.128 | 3.677 | 2.451 |
| 12 | 451 | ದಾವಣಗೆರೆ | 233 | 23.958 | 5.980 | 5.993 | 5.993 | 3.596 | 2.397 |
| 13 | 415 | ಧಾರವಾಡ | 144 | 14.635 | 3.370 | 3.755 | 3.755 | 2.253 | 1.502 |
| 14 | 462 | ಗದಗ | 122 | 12.313 | 2.810 | 3.168 | 3.168 | 1.901 | 1.267 |
| 15 | 410 | ಹಾಸನ | 267 | 27.030 | 6.570 | 6.820 | 6.820 | 4.092 | 2.728 |
| 16 | 463 | ಹಾವೇರಿ | 223 | 22.628 | 5.400 | 5.743 | 5.743 | 3.446 | 2.297 |
| 17 | 417 | ಕಲಬುರಗಿ | 264 | 27.153 | 6.190 | 6.988 | 6.988 | 4.193 | 2.795 |
| 18 | 411 | ಕೊಡಗು | 104 | 10.413 | 2.500 | 2.638 | 2.638 | 1.583 | 1.055 |
| 19 | 404 | ಕೋಲಾರ | 156 | 16.160 | 4.040 | 4.040 | 4.040 | 2.424 | 1.616 |
| 20 | 466 | ಕೊಪ್ಪಳ | 153 | 16.563 | 4.040 | 4.193 | 4.138 | 2.483 | 1.655 |
| 21 | 412 | ಮಂಡ್ಯ | 234 | 24.253 | 6.050 | 6.068 | 6.068 | 3.641 | 2.427 |
| 22 | 407 | ಮೈಸೂರು | 266 | 28.283 | 6.600 | 7.228 | 7.228 | 4.337 | 2.891 |
| 23 | 420 | ರಾಯಚೂರು | 180 | 20.303 | 5.04 | 5.088 | 5.063 | 3.038 | 2.025 |
| 24 | 452 | ರಾಮನಗರ | 127 | 13.218 | 3.370 | 3.283 | 3.283 | 1.970 | 1.313 |
| 25 | 405 | ಶಿವಮೊಗ್ಗ | 271 | 26.970 | 6.540 | 6.810 | 6.810 | 4.086 | 2.724 |
| 26 | 406 | ತುಮಕೂರು | 331 | 33.808 | 8.300 | 8.503 | 8.503 | 5.102 | 3.401 |
| 27 | 457 | ಉಡುಪಿ | 158 | 16.648 | 3.980 | 4.223 | 4.223 | 2.534 | 1.689 |
| 28 | 416 | ಉತ್ತರ ಕನ್ನಡ | 231 | 23.220 | 5.430 | 5.930 | 5.930 | 3.558 | 2.372 |
| 29 | 414 | ವಿಜಯಪುರ | 213 | 23.548 | 5.900 | 5.883 | 5.883 | 3.530 | 2.353 |
| 30 | 421 | ಯಾದಗಿರಿ | 123 | 13.520 | 3.380 | 3.380 | 3.430 | 2.058 | 1.372 |
| | | ಒಟ್ಟು | 6018 | 633.258 | 154.000 | 159.805 | 159.723 | 95.834 | 63.889 |

(ಎಂ.ಬಿ.ಧೋತ್ರೆ)
ಸರ್ಕಾರದ ಅಧೀನ ಕಾರ್ಯದರ್ಶಿ(ಜಿ.ಪಂ.)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.